ಓ ಎಸ್ ನಂ. 193/2020
ಡಿ ಡಬ್ಲೂಃ 1
ದಿನಾಂಕ 06-07-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ಎಸ್ ಆರ್ ವಕೀಲರಿಂದಃ

8. ನನ್ನ ತಂದೆ ಎಸ್ ಆರ್ ಶ್ರೀನಿವಾಸ್ ಶೆಟ್ಟಿಯವರಿಗೆ ಕಡೂರಿನಲ್ಲಿ ಸುಮಾರು 5.5 ಎಕರೆ ಜಮೀನು ಇತ್ತು. ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಎಕರೆ ಇತ್ತು ಎಂದು ನನಗೆ ನೆನಪಿಲ್ಲ, ಸಾಕ್ಷಿ ಮುಂದುವರೆದು ಅಗ್ರಿಮೆಂಟ್ ನಲ್ಲಿ ಇದೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಮರಣ ಹೊಂದಿದ ನಂತರ ನಾವು 4 ಜನ ಅಣ್ಣತಮ್ಮಂದಿರು ವಿಭಾಗವಾಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ನಾವು ಒಟ್ಟಿಗೆ ವ್ಯವಹಾರ ಮಾಡುತ್ತೇವೆ ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ನಾನು ಮತ್ತು ಇತರೇ ಸಹೋದರರು ಸೇರಿ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ.

9. 2009 ನೇ ಇಸವಿಯಲ್ಲಿ ವಾದಿ ಮತ್ತು ಅವರ ಮಕ್ಕಳ ಹೆಸರಿನಲ್ಲಿ ನಾನು ಮತ್ತು ನನ್ನ ಸಹೋದರರು ಸೇರಿಕೊಂಡು ಒಂದು ಜಾಯಿಂಟ್ ವೆಂಚರನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ದಾಖಲೆಯ ಸಂಪೂರ್ಣ ಒಕ್ಕಣೆಕೆಯನ್ನು ಓದಿ, ಓದಿಸಿ ತಿಳಿದು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ದಾಖಲೆ ಕಡೂರಿನ ಉಪನೊಂದಾವಣಾ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ ಎಂದರೆ ಸರಿ. ಇಂದಿಗೂ ಸಹ ಸದರಿ ಜಾಯಿಂಟ್ ವೆಂಚರ್ ಚಾಲ್ತಿಯಲ್ಲಿರುತ್ತದೆ

ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಅದರ ರದ್ದತಿಗಾಗಿ ಕಡೂರಿನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ದಾವೆಯ ಸಂಖ್ಯೆ ನನಗೆ ನೆನಪಿಲ್ಲ. ಸದರಿ ದಾವೆಯನ್ನು ಸಲ್ಲಿಸಲು ನಾನು ಮತ್ತು ನನ್ನ ಸಹೋದರರು ಸೇರಿ ಮಾಹಿತಿ ನೀಡಿರುತ್ತೇವೆ. ಸದರಿ ದಾವೆಗೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಮತ್ತು ನನ್ನ ಸಹೋದರರು 3 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ಸಲ್ಲಿಸಿದಂತಹ ಓ ಎಸ್ ನಂ.318/2020 ರ ದಾವೆ ವಜಾವಾಗಿರುತ್ತದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯನ್ನು ನನ್ನ ಸಹೋದರನಾದ ಶ್ರೀನಾಥರವರು ನೋಡಿಕೊಳ್ಳುತ್ತಿದ್ದರು. 2010 ನೇ ಇಸವಿಯಲ್ಲಿ ನಾನು ಮತ್ತು ನನ್ನ ಕುಟುಂಬದವರು ಸೇರಿಕೊಂಡು ಓ ಎಸ್ ನಂ.75/76/86-2020 ರ ದಾವೆಗಳಲ್ಲಿ ಇರುವ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಶಾಂತಕುಮಾರ್ ಎನ್ನುವವರಿಗೆ ನೊಂದಾಯಿತ ಪವರ್ ಆಫ್ ಆಟಾರ್ನಿ ಮಾಡಿಕೊಟ್ಟಿದ್ದೇವು ಎಂದರೆ ಸರಿ.

11. ಓ ಎಸ್ ನಂ. 378/2020 ರ ದಾವೆಯನ್ನು ನಾನು ಮತ್ತು ನನ್ನ ಸಹೋದರರು ಈ ದಾವೆಯ ವಾದಿ ಮತ್ತು ಆತನ ಮಕ್ಕಳ ವಿರುದ್ದ ಚಿಕ್ಕಮಗಳೂರಿನಲ್ಲಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ದಾವೆ ವಜಾವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಮಗಳೂರಿನ ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಎ ಪಿ ನಂ.1/2023 ರಂತೆ (Arbitration Petition) ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಓ ಎಸ್ ನಂ.378/2020 ರಲ್ಲಿ ಉಭಯಪಕ್ಷಗಾರರ ಒಪ್ಪಂದದಂತೆ

ಮಧ್ಯಸ್ಥಿಕೆಯಲ್ಲಿ ವ್ಯವಹಾರವನ್ನು ಇತ್ಯರ್ಥ ಪಡಿಸಲು ತಿಳಿಸಿದ್ದು, ಅದರಂತೆ ಮಧ್ಯಸ್ಥಿಕೆಗಾರರ ಮುಂದೆ ಪ್ರಕರಣ ನಡೆದು ನಮ್ಮ ಮನವಿ ವಜಾವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಜಾಯಿಂಟ್ ಡೆವಲಪ್ ಮೆಂಟ್ ಅಗ್ರಿಮೆಂಟ್ ನಲ್ಲಿ ಮಾಲೀಕರಿಗೆ ಶೇಕಡಾ 64 ರಷ್ಟು ಮತ್ತು ಡೆವಲಪರ್ ಗೆ ಶೇಕಡಾ 36 ರಷ್ಟು ಕೊಡಬೇಕು ಎಂದರೆ ಸರಿ. ಒಟ್ಟು 5 ಎಕರೆ 18 ಗುಂಟೆ ಜಮೀನಿನಲ್ಲಿ ಮಾಲೀಕರಾದ ನಮಗೆ ಎಷ್ಟು ನಿವೇಶನಗಳು ಬಂದಿವೆ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ, ದಾಖಲಾತಿಗಳನ್ನು ಪರಿಶೀಲಿಸಬೇಕು ಎಂದು ನುಡಿದಿರುತ್ತಾರೆ. ಓ ಎಸ್ ನಂ. 75/2020, 76/2020, 86/2020 ರ ದಾವೆಗಳಲ್ಲಿ ನಾನು ಹಾಜರಾಗುತ್ತಿಲ್ಲ, ನನ್ನ ಸಹೋದರ ಶ್ರೀನಾಥ್ ರವರು ನೋಡಿಕೊಳ್ಳುತ್ತಿದ್ದಾರೆ.

12. ನನ್ನ ಮುಖ್ಯ ವಿಚಾರಣೆಯ 6 ನೇ ಖಂಡಿಕೆಯಲ್ಲಿ ತಿಳಿಸಿರುವಂತೆ ವಾದಿ ನಮ್ಮ ದಾಖಲಾತಿಗಳನ್ನು ಪೋರ್ಜರಿ ಮಾಡಿರುತ್ತಾರೆ ಎಂಬ ವಿಚಾರದ ಬಗ್ಗೆ ನಾನು ವಾದಿ ಮತ್ತು ಅವರ ಮಕ್ಕಳ ವಿರುದ್ದ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿರುತ್ತೀನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ಇಂದಿಗೂ ಸಹ ವಾದಿ ಮತ್ತು ಅವರ ಕುಟುಂಬ ಹಾಗೂ ನಾನು ಸದರಿ ಜಾಯಿಂಟ್ ವೆಂಚರ್ ವ್ಯವಹಾರಕ್ಕೆ ಸಂಬಂದಪಟ್ಟಂತೆ ಅಷ್ಟಕ್ಕೆ ಅಷ್ಟೆ ಎಂದರೆ ಸರಿ. ಜಾಯಿಂಟ್ ವೆಂಚರ್ ಅಗ್ರಿಮೆಂಟ್ ಪ್ರಕಾರ ಮಾಲೀಕರಾದ ನಮಗೆ ನಮ್ಮ ಭಾಗದ ಸಂಪೂರ್ಣ ನಿವೇಶನಗಳು ಬಂದಿರುತ್ತವೆ ಎಂದರೆ ಸಾಕ್ಷಿ ಕೆಲವು ತಪ್ಪುಗಳು ಆಗಿದ್ದು, ಆ ಬಗ್ಗೆ ಪ್ರಕರಣ ದಾಖಲಿಸಿದ್ದೇವೆ ಎಂದು ನುಡಿದಿರುತ್ತಾರೆ. ನಾಗೇಂದ್ರ ಬಿನ್ ಕೃಷ್ಣಮೂರ್ತಿ, ದರ್ಶನ್, ಮಾದಪ್ಪ

ಹಾಗೂ ಸುಮಾರು 25-30 ಜನರಿಗೆ ನಾವು ನಿವೇಶನಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಯಾವುದೇ ನಿವೇಶನವನ್ನು ಮಾರಾಟ ಮಾಡುವ ಮೊದಲು ಅದಕ್ಕೆ ಸಂಬಂದಪಟ್ಟ ಮಾಲೀಕತ್ವದ ದಾಖಲೆಗಳನ್ನು ಪರಿಶೀಲಿಸಿ ಕೊಂಡುಕೊಳ್ಳುತ್ತಾರೆ ಎಂದರೆ ಸರಿ. ನಮ್ಮ ಭಾಗಕ್ಕೆ ಬಂದಂತಹ ನಿವೇಶನಗಳಲ್ಲಿ ಸಮರ್ಪಣಾ ಟ್ರಸ್ಟಗೂ ಸಹ ನಿವೇಶನ ನೀಡಿರುತ್ತೇವೆ ಎಂದರೆ ಸಾಕ್ಷಿ ದಾನದ ರೂಪದಲ್ಲಿ ನೀಡಲಾಗಿದೆ ಎಂದು ನುಡಿದಿರುತ್ತಾರೆ. ನಗರಾಭಿವೃದ್ಧಿ ಪ್ರಾಧಿಕಾರದಿಂದ ಮತ್ತು ಮುನಿಷಿಪಲ್ ಕಚೇರಿಯಿಂದ ಎನ್ ಓ ಸಿ ಪಡೆಯದೆ ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

13. ನಾನು ಪ್ರೊನೋಟ್ ಮತ್ತು ಚೆಕ್ಕಿನ ಮುಖಾಂತರ ಒಟ್ಟು 11 ಲಕ್ಷದ 26 ಸಾವಿರ ರೂಗಳನ್ನು ವಾದಿಯಿಂದ ಪಡೆದುಕೊಂಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರೊನೋಟಿನಗೆ ಮಾಹೆಯಾನ ಶೇಕಡಾ 1 ರಂತೆ ಬಡ್ಡಿ ಕೊಡುವುದಾಗಿ ಒಪ್ಪಿ ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವೈಯುಕ್ತಿಕ ಖರ್ಚಿಗಾಗಿ ಹಣವನ್ನು ಬಳಸಿಕೊಂಡು ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ಹೂಡುವ ಸಮಯದಲ್ಲಿ ನನಗೆ ನೋಟೀಸು ನೀಡಿದ್ದು ಅದಕ್ಕೆ ನಾನು ನನ್ನ ವಕೀಲರ ಮೂಲಕ ಪ್ರತ್ಯುತ್ತರ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವೆಯ ಸಮನ್ಸ ಬಂದ ನಂತರ ವಿಚಾರ ತಿಳಿದು ನಮ್ಮ ವಕೀಲರ ಮೂಲಕ ಪ್ರತ್ಯುತ್ತರ ನೋಟೀಸು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ವೈಯುಕ್ತಿಕ

ಅವಶ್ಯಕತೆಗಾಗಿ ವಾದಿಯಿಂದ ಹಣವನ್ನು ಪಡೆದಿದ್ದರೂ ಸಹ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ.**,** ಕಡೂರು**.**